ಅ) ಹುಬ್ಬಳ್ಳಿಯಲ್ಲಿರುವ ಸರಕಾರಿ ವಸತಿಗೃಹಗಳನ್ನು ಲೋಕೋಪಯೋಗಿ ಇಲಾಖೆಯ ವಸತಿಗೃಹಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಇ) ಕಳೆದ ಮೂರು ವರ್ಷಗಳಲ್ಲಿ ಆ ಬಗ್ಗೆ ಮಾಡಿದ ವೆಚ್ಚ ಎಷ್ಟು; ಈ ಕಾಮಗಾರಿಗಳು ಯಾವುವು? (ವಿವರ ನೀಡುವುದು)

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಸದರಿ ವಸತಿಗೃಹಗಳ ನಿರ್ವಹಣೆಯನ್ನು ವಾರ್ಷಿಕ ನಿರ್ವಹಣೆ ಅನುದಾನದಲ್ಲಿ ಸರಿಯಾಗಿ ಮಾಡಲಾಗುತ್ತಿದೆ.

ಆ) ವಾರ್ಷಿಕ ನಿರ್ವಹಣೆ ಅನುದಾನದಲ್ಲಿ ನಿರ್ವಹಿಸಲಾಗುತ್ತಿದೆ.

ಇ) ಕಳೆದ ಮೂರು ವರ್ಷಗಳಲ್ಲಿ ಮಾಡಿದ ವೆಚ್ಚ ಈ ಕೆಳಕಂಡಂತಿದೆ.

1995-96-ರೂ.9.94 ಲಕ್ಷ

1996-97-ರೂ. 12.07 ಲಕ್ಷ

1997-98- ರೂ.7.01 ಲಕ್ಷ ಸಾಮಾನ್ಯ ವಾರ್ಷಿಕ ದುರಸ್ತಿ ಕಾರ್ಯಗಳಾದ ಸುಣ್ಣ-ಬಣ್ಣ ಡ್ರೈನೇಜ್ ದುರಸ್ತಿ, ಬಾಗಿಲು ಕಿಟಕಿಗಳ ದುರಸ್ತಿ, ಸೋರುವಿಕೆ ತಡೆಯುವುದು ಇತ್ಯಾದಿಗಳಿಗೆ ಈ ಹಣವನ್ನು ಖರ್ಚು ಮಾಡಲಾಗಿದೆ.

ಹುಬ್ಬಳ್ಳಿಯಲ್ಲಿ ಪ್ರಾಚೀನ ಸಂಗ್ರಹಾಲಯ ಸ್ಥಾಪನೆ.

2876:(3861)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಿಣ): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉತ್ತರ ಕರ್ನಾಟಕದಲ್ಲಿರುವ ಪ್ರಾಚೀನ ಪರಂಪರೆಯನ್ನು ಪ್ರತಿಬಿಂಬಿಸುವ ಅನೇಕ ದೇವಾಲಯಗಳು, ವಿವಿಧ ಧಾರ್ಮಿಕ ಕೇಂದ್ರಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇವುಗಳ ಸಂರಕ್ಷಣೆ ಹಾಗೂ ಪ್ರಚಾರಕ್ಕಾಗಿ ಹುಬ್ಬಳ್ಳಿಯಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗುವುದೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ.ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಬಂದಿದೆ. ಹುಬ್ಬಳ್ಳಿ ಅಥವಾ ಧಾರವಾಡದಲ್ಲಿ ಪ್ರಾಚ್ಯ ವಸ್ತು ಸಂಗ್ರಹಾಲಯವನ್ನು ಅನುದಾನ ಲಭ್ಯತೆಗನುಗುಣದಾಗಿ ಆರಂಭಿಸಲು ಉದ್ದೇಶಿಸಿದೆ.

ಆ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯಗಳನ್ನು ಆರಂಭಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯಲ್ಲಿ ಮುಂದೆ ಲಭ್ಯವಾಗುವ ಅನುದಾನಕ್ಕನುಗುಣವಾಗಿ ಹುಬ್ಬಳ್ಳಿ ಇಲ್ಲವೇ ಧಾರವಾಡದಲ್ಲಿ ಸಂಗ್ರಹಾಲಯವನ್ನು ಆರಂಭಿಸಲು ಪರಿಗಣಿಸಲಾಗವುದು.

ಮಂಗಳೂರು ತಾಲ್ಲೂಕಿನಲ್ಲಿರುವ ಅರಣ್ಯ ಭೂಮಿ.

2879:(3942)

ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಂಗಳೂರು ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ಜಮೀನಿನ ವಿಸ್ತೀರ್ಣವೆಷ್ಟು?

2) ಯಾವ ಯಾವ ಗ್ರಾಮದಲ್ಲಿ ಎಷ್ಟು ಎಕರೆ?

3) ಅರಣ್ಯ ಇಲಾಖಾ ಭೂಮಿಯಲ್ಲಿ ವಾಸದ ಮನೆಗಳನ್ನು ನಿರ್ಮಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು):

1 ಮತ್ತು 2) ರಕ್ಷಿತಾರಣ್ಯ ಯಾವುದೂ ಇರುವುದಿಲ್ಲ. ಕಂದಾಯ ಇಲಾಖೆಯಿಂದ ಹಸ್ತಾಂತರಿಸಲಾದ ಜಮೀನುಗಳಲ್ಲಿ ನೆಡುತೋಪು ಬೆಳೆಸಲಾಗಿದೆ. ಅಂತಹ ಭೂಮಿಯ ವಿವರಗಳು ಕೆಳಗಿನಂತಿದೆ;